# ದೇವರ ಹೊಸ ಆಡಳಿತ

ಸತ್ಯವೇದದ ವಿದ್ಯಾರ್ಥಿಯು, ಮಾನವನ ಕುರಿತಾಗಿ ದೇವರು ಇಟ್ಟಿರುವ ಮೂರು ಯುಗಗಳನ್ನು ನೋಡಲು ಸಾಧ್ಯವಿದೆ - ಪೂರ್ವಿಕರ, ಯೆಹೂದ್ಯರ ಹಾಗೂ ಕ್ರೈಸ್ತರ ಕುರಿತ ಹಂಚಿಕೆಗಳನ್ನು ಗಮನಿಸಬಹುದು. ಇತಿಹಾಸದಲ್ಲಿ ದೇವರು ತನ್ನ ಕೃಪೆ ಹಾಗೂ ಚಿತ್ತವನ್ನು ಪ್ರದರ್ಶಿಸಿದ ಮೂರು ವಿಧದ "ಕಾಲಗಳನ್ನು" ಕಾಣುತ್ತೇವೆ.

ದೇವರು ಕುಟುಂಬಗಳೊಂದಿಗೆ ಮಾಡಿದ ವ್ಯವಹಾರಗಳ ಕಾಲವನ್ನು "ಪೂರ್ವಜರ" ಅಥವಾ ಮೂಲ *ಪಿತೃಗಳ* ಕಾಲವೆಂದು ಪರಿಗಣಿಸಲಾಗಿದೆ. ಆ *ಕುಟುಂಬದ* ತಂದೆಯೊಂದಿಗೆ ದೇವರು ಮಾತನಾಡಿದನು; ಆದ್ದರಿಂದ ದೇವರ ವ್ಯವಹಾರವು *ತಂದೆಯೂ* - ಯಾಜಕನೂ ಆದ ಯಜಮಾನನೊಂದಿಗೆ ನಡೆದಿತ್ತು. ಕುಟುಂಬದ ನಾಯಕತ್ವವು ತಂದೆಯಿಂದ ಅವನ ವಂಶದ ಪ್ರಥಮ ಮಗನಿಗೆ ವರ್ಗಾಹಿಸಲ್ಪಡುತ್ತಿತ್ತು.

ನಂತರದ ವ್ಯವಹಾರವು "ಯೆಹೂದ್ಯ" ಅಥವಾ "ಮೋಶೆಯ," ಸಂಗಡದ್ದಾಗಿತ್ತು. ಅಲ್ಲಿ ವ್ಯಕ್ತಿಗತ ಮನುಷ್ಯನನ್ನು ಹೊರತು ಪಡಿಸಿ, ಸೀನಾಯಿ ಪರ್ವತದಲ್ಲಿ ಮೋಶೆಗೆ ನೀಡಿದ ಧರ್ಮಶಾಸ್ತ್ರದ ಮುಖಾಂತರ, ಒಂದು *ಜನಾಂಗದೊಂದಿಗೆ* ಇದ್ದ ಸಂಬಂಧವಾಗಿತ್ತು (ವಿಮೋಚನಕಾಂಡ 20; ಯೋಹಾನ 1:17). ಇದರಲ್ಲಿ ಯಾಜಕ ವರ್ಗದ ಸೇವೆಗೂ ಅವಕಾಶವನ್ನು ದೊರಕಿಸಿ ಕೊಡಲಾಗಿತ್ತು, ಅದು ಲೇವಿಯ *ಕುಲದವನೂ*, ಮೋಶೆಯ ತಮ್ಮನಾದ ಆರೋನನಿಗೂ ಅನುಗ್ರಹವಾಗಿ ದೊರೆಯಿತು, ಅವನು ಮೊದಲು ಮಾಹಾಯಾಜಕ ಸೇವೆಯನ್ನು ವಹಿಸಿಕೊಂಡನು (ವಿಮೋಚನಕಾಂಡ 28; 29). ಆ ನಿಯಮವು ಅಸಹಜವಾಗಿದ್ದು, ಆತ್ಮೀಯ ಹಾಗೂ ಲೌಕಿಕ ಸಂಬಂಧವನ್ನು ಹೊಂದಿತ್ತು. ಅದರಲ್ಲಿ ಆರಾಧನೆ ಮತ್ತು ದೇವರ ಸೇವೆಯು ಒಳಗೊಂಡಿದ್ದರೂ, ಆ ಹೊಸ ಜನಾಂಗಕ್ಕೆ ಸಮಾಜಿಕವಾದ ನಿಯಮಾವಳಿಯಾಗಿಯೂ ಕಾರ್ಯನಿರ್ವಹಿಸಿತ್ತು. ಅದ್ದರಿಂದ, ಅದರಲ್ಲಿ ಅಪರಾಧ ನಿಯಮಾವಳಿ, ಶಿಕ್ಷೆ, ಆರ್ಥಿಕ ಸಂಗತಿಗಳು, ಹಾಗೂ ಆರೋಗ್ಯ ಮತ್ತು ಸ್ವಚ್ಛತೆಯ ಅನುಬಂಧಗಳು ಸಹ ಒಳಗೊಂಡಿದ್ದವು.

ಇಸ್ರಾಯೇಲ್ ಜನಾಂಗದವರಿಗೆ ಮಾತ್ರ ಮೋಶೆಯ ನಿಬಂಧನೆಗಳನ್ನು ನೀಡಲಾಯಿತು (ವಿಮೋಚನಕಾಂಡ 34:27, 28), ಆದರೆ ಲೋಕದ ಇತರೆ ವಾಸಿಗಳಿಗೆ ಅದು ಅನ್ವಯ ವಾಗಲಿಲ್ಲ, ಅವರನ್ನು ಅನ್ಯರೆಂದು ಯೆಹೂದ್ಯರು ಪರಿಗಣಿಸಿದರು. ಮೋಶೆಯ ನಿಭಂದನೆಗಳ ಆಡಳಿತದ ಕಾಲದಲ್ಲಿ, ಅಂದರೆ ಹದಿನೈದು ಶತಮಾನಗಳ ಕಾಲ ಅನ್ಯರು ಯಾವದೇ ಕಟ್ಟಳೆ ಗಳನ್ನು ಹೊಂದಿದ್ದರು ಎಂದು ಸತ್ಯವೇದವು ತಿಳಿಸುವದಿಲ್ಲ, ಆದರೆ ದೇವರು ಅನ್ಯರ ಬಗ್ಗೆಯೂ ಚಿಂತನೆ ನಡೆಸುವವನಾಗಿದ್ದನು ಎಂಬುದು ಬಹಳ ಸ್ಪಷ್ಟವಾಗಿದೆ.[1]

ಯೆಹೂದ್ಯರ ಪರಿಗಣನೆಯ ಕಾಲದಲ್ಲಿ, ಅನ್ಯರೊಂದಿಗೂ ದೇವರು ಸಂಪರ್ಕದಲ್ಲಿದ್ದನು ಎಂಬ ಸೂಚನೆಗಳನ್ನು ಕಾಣುತ್ತೇವೆ, ಅದನ್ನು ಹಳೇ ಒಡಂಬಡಿಕೆಯ ಚರಿತ್ರೆಯಲ್ಲಿ ಗಮನಿಸುತ್ತೇವೆ. ಆದ್ದರಿಂದ ಕೆಲವು ಪಂಡಿತರ ಪ್ರಕಾರ, ಮೂಲಪಿತೃಗಳ ನಿಯಮವು, ಯೇಸುವಿನ ಕ್ರೂಜೆಯ ಕಾಲದವರೆಗೂ, ಅನ್ಯರಿಗೂ ಅನ್ವಹಿಸಿತ್ತು ಎಂದು ಹೇಳುತ್ತಾರೆ.

"ಕ್ರೈಸ್ತರು" ಎಂಬುದು ಮೂರನೆಯ ವಿಷಯಾಧಾರವಾಗಿದೆ. ಯೇಸು ಶಿಲುಬೆಯ ಮೇಲೆ ಮರಣವನ್ನು ಹೊಂದಿದಾಗ, ಆತನು ಪ್ರಪಂಚಕ್ಕೆ ನೂತನವಾದ ನಿಬಂಧನೆಗಳನ್ನು ನೀಡಿದನು. ಪೌಲನು ಇದರ ಕುರಿತು, "ಜೀವವನ್ನುಂಟುಮಾಡುವ ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು ಪಾಪಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸ್ತುವಿನ ಮೂಲಕ ಬಿಡಿಸಿತು ಅಂದನು" (ರೋಮಾಪುರ 8:1). "ಹಾಗೂ ಕ್ರಿಸ್ತನ ನಿಯಮಕ್ಕೆ ಒಳಗಾದವನು"

ಅಂದನು (1 ಕೊರಿಂಥ 9:21). ಹೀಗೆ "ಕ್ರಿಸ್ತನ ನಿಯಮವನ್ನು ನೆರವೇರಿಸಿ" (ಗಲಾತ್ಯ 6:2). ಯಾಕೋಬನು ಬರೆದು, "ಬಿಡುಗಡೆಯನ್ನುಂಟು ಮಾಡುವ ಸರ್ವೊತ್ತಮ ಧರ್ಮ ಪ್ರಮಾಣ" (ಯಾಕೋಬ 1:25; 2:8), ಹಾಗೂ "ರಾಜಾಜ್ಞೆ" ಎಂದಿರುವನು. ಸಕಲರೂ ಈ ಹೊಸ ನಿಬಂಧನೆಗೆ ಒಳಗಾಗುವರು, ಇದಕ್ಕೆ ಎಲ್ಲಾ ಜನಾಂಗದವರೂ ಒಳಪಡುವರು, ಈ ಹೊಸ ಕ್ರಮದಲ್ಲಿ ದೇವರು *ವೈಯಕ್ತಿಕವಾಗಿ* ವ್ಯವಹರಿಸುವನು, ಇದಕ್ಕೆ ಕುಟುಂಬ ಅಥವಾ ಒಂದು ಜನಾಂಗ ಸೀಮಿತವಾಗಿರುವದಿಲ್ಲ.

ಕ್ರಿಸ್ತನ ರಾಜ್ಯಕ್ಕೆ ಒಳಗಾದವರು, ಆತನ ನಿಯಮಕ್ಕೆ ಒಳಪಡುವರು ಎಂಬ ಸತ್ಯಾಂಶವನ್ನು ಅಪೊಸ್ತಲರ ಕೃತ್ಯಗಳು ಘಂಟಾ ಘೋಷವಾಗಿ ಪ್ರಚುರ ಪಡಿಸುತ್ತದೆ. ಮೋಶೆಯ ನಿಬಂಧನೆಗಳನ್ನು ಅರಿತ ಮೊದಲ ಯೆಹೂದ್ಯರಿಗೆ, ಅಪೊಸ್ತಲರು ಪ್ರಥಮವಾಗಿ ತಿಳಿಸಿದರು. ನಂತರದಲ್ಲಿ ಅನ್ಯರಿಗೆ ಉಪದೇಶಮಾಡಿದರು, ಅ ಅನ್ಯರಲ್ಲಿ ಕೊರ್ನೇಲ್ಯನು ಮೊದಲಿಗನಾಗಿರುವನು (ಅಪೊಸ್ತಲರ ಕೃತ್ಯಗಳು 10).

ವ್ಯಕ್ತಿಗತವಾಗಿ ಪ್ರತಿಕ್ರಿಯೆ ತೋರಿದವರು ದೇವರೊಂದಿಗೆ, ಯೇಸುವಿನ ವಾಗ್ದಾನದ ಸಭೆಗೆ ಸಂಬಂಧ ಪಟ್ಟವರಾದರು (ಮತ್ತಾಯ 16:18). ಬೇಗನೆ ಸಭೆಗಳು ಪ್ರಪಂಚದಾದ್ಯಂತ ಹರಡಿಕೊಂಡವು.[2] ಈಗ ದೇವರು ತನ್ನ ಮಕ್ಕಳೊಂದಿಗೆ ಹೇಗೆ ವ್ಯವಹರಿಸುವನೆಂದು ಅಪೊಸ್ತಲರ ಕೃತ್ಯವು ಪ್ರಚುರಪಡಿಸುತ್ತದೆ, ಹಾಗೂ ದೇವರು ವ್ಯಕ್ತಿಗತವಾಗಿಯೂ ಕರ್ತನ ಸಭೆಯಲ್ಲಿಯೂ ವ್ಯವಹರಿಸುವನು ಎಂದು ಸ್ಪಷ್ಟ ಪಡಿಸುತ್ತದೆ.

## ಸಭೆಗಳು ಇತರೆ ಸಭೆಗಳೊಂದಿಗೆ ಸಹವಾಸವನ್ನು ಹೊಂದುತ್ತವೆ

ಮೊದಲ ಸಭೆಯಾದ ಯೆರೂಸಲೇಮಿನವರು (ಅಪೊಸ್ತಲರ ಕೃತ್ಯಗಳು 2:41-47) ಇತರೆ ಪಟ್ಟಣದಲ್ಲಿ ದೇವರನ್ನು ಆರಾಧಿಸುತ್ತಿದ್ದ ಸಭೀಕರನ್ನು ಮಾನ್ಯ ಮಾಡಿದರು. ಪೇತ್ರ ಮತ್ತು ಯೋಹಾನರ ಮುಖಾಂತರ ಅಂತಿಯೋಕ್ಯದ ಕ್ರೈಸ್ತರಿಗೆ ಸಹಾಯವನ್ನೂ ತಲುಪಿಸಿದರು (ಅಪೊಸ್ತಲರ ಕೃತ್ಯಗಳು 8:14). ತರುವಾಯ, ಈ ಜನರು ದಮಸ್ಕದ ದಾರಿಯಲ್ಲಿ ಪರಿವರ್ತನೆಗೊಂಡ ತಾರ್ಸದ ಸೌಲನನ್ನು ಅಂಗೀಕರಿಸಿದರು (ಅಪೊಸ್ತಲರ ಕೃತ್ಯಗಳು 9:26-28). ಕೈಸರೈಯದಲ್ಲಿ ಪರಿವರ್ತನೆಗೊಂಡ ಅನ್ಯರನ್ನು ಯೆರೂಸಲೇಮಿನ ಕ್ರೈಸ್ತರು ಒಪ್ಪಿಕೊಂಡರು (ಅಪೊಸ್ತಲರ ಕೃತ್ಯಗಳು 11:18), ಅದು ಯೆಹೂದ್ಯರ ಮತ್ತು ಅನ್ಯರ ನಡುವಿನ ಗೋಡೆಯನ್ನು ಕೆಡವಿ ಹಾಕಿದ ನಿದರ್ಶನವಾಯಿತು. ಈ ಸಭೆಯವರೇ, "ಹೊಸ ಒಡಂಬಡಿಕೆಯ ಮೊದಲ ಪ್ರೇರಿತವಾದ ಪತ್ರಿಕೆಯನ್ನು" ಕಳುಹಿಸಿದವರಲ್ಲಿ ಮೊದಲಿಗರಾದರು, ಸುನ್ನತಿಯ ಬಗ್ಗೆ ಅನ್ಯರು ಮಾಡಬೇಕಾದ ಕರ್ತವ್ಯದ ಕುರಿತ ಪತ್ರಿಕೆಯು ಅದಾಗಿತ್ತು (ಅಪೊಸ್ತಲರ ಕೃತ್ಯಗಳು 15:22-31). ಈ ನಿರ್ಣಯವು ಖಂಡಿತವಾಗಿಯೂ ಪ್ರೇರಿತವಾಗಿತ್ತು, ಅದು ಅಪೊಸ್ತಲರು ಒಟ್ಟು ಹಾಕಿದ ಮತಗಳ ಪ್ರಕಾರವಾಗಿರದೇ, ಪವಿತ್ರಾತ್ಮನ ಮಾರ್ಗದರ್ಶನಕ್ಕೆ ಅನುಗುಣವಾಗಿತ್ತು (ಅಪೊಸ್ತಲರ ಕೃತ್ಯಗಳು 15:28).

ಕ್ಷಾಮದ ಕಾಲದಲ್ಲಿ ಅಂತಿಯೋಕ್ಯದ ಕ್ರೈಸ್ತರು ಯೆರೂಸಲೇಮಿನವರಿಗೆ ಹಾಗೂ ಯುದಾಯದವರಿಗೆ ದಾನ ದ್ರವ್ಯಗಳನ್ನು ಕಳುಹಿಸಿದರು (ಅಪೊಸ್ತಲರ ಕೃತ್ಯಗಳು 11:27-30). ಮೆಡಿಟೇರೇನಿಯನ್ ಸಮುದ್ರದ ಆಚೆ ಸುವಾರ್ತೆಯನ್ನು ಸಾರಲು ಅಂತಿಯೋಕ್ಯದ ಸಭೆಯವರು ಸುವಾರ್ತಿಕರನ್ನು ಕಳುಹಿಸಿದರು (ಅಪೊಸ್ತಲರ ಕೃತ್ಯಗಳು 13:1-3), ಮೂರು ವರ್ಷಗಳ ನಂತರ ಅವರು ಹಿಂದಿರುಗಿದಾಗ, ಅವರ ಸೇವಾ ವರದಿಯನ್ನು ಅವರು ಸ್ವೀಕರಿಸಿದರು (ಅಪೊಸ್ತಲರ ಕೃತ್ಯಗಳು 14:26, 27).

ದಾನದ ಅಗತ್ಯತೆ ಇದ್ದಾಗ ಸಹಕರಿಸಿದ ಒಂದು ನಿದರ್ಶನವೂ ಇರುತ್ತದೆ. ಯುದಾಯದ ಕ್ಷಾಮದ ಸಮಯದಲ್ಲಿ ಗಲಾತ್ಯ, ಮೆಕೆದೋನ್ಯ, ಹಾಗೂ ಅಖಾಯದವರು ಸಹಾಯವನ್ನು ತಲುಪಿಸಿದರು. ಪೌಲನು ಆ ಸಹಾಯಗಳನ್ನು ತಲುಪಿಸಿದನು (ಅಪೊಸ್ತಲರ ಕೃತ್ಯಗಳು

24:17; 1 ಕೊರಿಂಥ 16:1, 2; 2 ಕೊರಿಂಥ 8:1; 9:1, 2).

ಪರಿಚಿತವಾದಂಥ ಪ್ರಪಂಚದಲ್ಲಿನ ಸಭೆಗಳವರು ಪರಸ್ಪರರನ್ನು ಅರಿತುಕೊಂಡರು, ಪರಸ್ಪರ ಸಹಾಯದ ಹಸ್ತವನ್ನು ನೀಡಿದರು, ಪರಸ್ಪರ ಅನ್ಯೋನ್ಯತೆಯನ್ನು ಹೊಂದಿದರು. ಕರ್ತನ ಸಭೆಯು, ಪ್ರಾಂತಿಯ ಸಭೆಗಳೆಂದು ಗ್ರಹಿಸಿಕೊಂಡರು. ಸ್ಥಳೀಯ ಸಭೆಗಳು ಒಂದು ಚಿಕ್ಕ ಸಾರ್ವತ್ರಿಕ ಸಭೆಯೆಂದು ಗ್ರಹಿಸಿಕೊಂಡರು.

## ವಿಶೇಷವಾದ ಜನರು ಸಭೆಗಳಿಗೆ ನಾಯಕತ್ವ ನೀಡಿದರು

ಆರಂಭದಲ್ಲಿ ಯೆರೂಸಲೇಮಿನ ಸಭೆಗೆ, ಅಪೊಸ್ತಲರು ನಾಯಕತ್ವ ನೀಡಿದರು. ಅವರು ಉಪದೇಶವನ್ನು ಮಾತ್ರ ನೀಡದೆ, ಜನರಲ್ಲಿದ್ದ ಅಗತ್ಯತೆಗಳನ್ನು ಸಮನಾಗಿ ಪೂರೈಸಿದರು. ಈ ಕೊರತೆಗಳು ಉದ್ಭವಿಸುವಾಗ, ಕ್ರೈಸ್ತರು ತಮ್ಮ ದಾನಗಳನ್ನು "ಅಪೊಸ್ತಲರ ಪಾದಗಳಲ್ಲಿ" ತಂದಿಟ್ಟರು (ಅಪೊಸ್ತಲರ ಕೃತ್ಯಗಳು 4:37). ಈ ದಿವಸಗಳಲ್ಲಿನ, ಈ ವಿಧವಾದ ಏರ್ಪಾಟನ್ನು ಒಬ್ಬನು ಬ್ಯಾಂಕಿನ ಖಾತೆ ಅಥವಾ ಸಭೆಯ ಉಗ್ರಾಣ ಎಂದು ಕರೆಯಬಹುದು. ಆ ಹಣವನ್ನು ಒಂದು ಗುಂಪಿಗೆ ನೀಡಲಾಯಿತು, ಅದನ್ನು ವಿತರಣೆ ಮಾಡುವ ನಿರ್ಣಯವನ್ನು ಅಪೊಸ್ತಲರು ಹೊಂದಿದ್ದರು, ಈ ವಿತರಣಾ ಕಾರ್ಯದಿಂದ ಅಪೊಸ್ತಲರು ಬಿಡುಗಡೆಗೊಳ್ಳಲು, ವಿಶೇಷ ಸೇವಕರನ್ನು ಆಯ್ಕೆ ಮಾಡಲಾಯಿತು. ನಂತರದಲ್ಲಿ ಅವರನ್ನು ಡೀಕನ್‍ಗಳು ಎಂದು ಕರೆಯಲಾಯಿತು - ಅಪೊಸ್ತಲರಿಗೆ ಸಹಕರಿಸುವ ಸಲುವಾಗಿ ಅವರನ್ನು ಆಯ್ಕೆ ಮಾಡಿದರು (ಅಪೊಸ್ತಲರ ಕೃತ್ಯಗಳು 6:1-6). ಅಪೊಸ್ತಲರ ವ್ಯಕ್ತಿಗತವಾದ ನಾಯಕತ್ವವು ತಾತ್ಕಾಲಿಕ ವಾಗಿತ್ತು, ನಿರಂತರವಾದ ನಾಯಕತ್ವಕ್ಕೆ ಅಪೊಸ್ತಲರ ಅಗತ್ಯತೆಯು ಇರಲಿಲ್ಲ ಎಂಬುದನ್ನು ದೇವರು ಸ್ಪಷ್ಟಪಡಿಸಿರುವನು. ಅವರು ಅಲ್ಲೇ ಇರಬೇಕೆಂಬ ಪ್ರತೀತಿ ಇರಲಿಲ್ಲ.

ಕೆಲವು ವರ್ಷಗಳ ನಂತರ, ಯುದಾಯದಲ್ಲಿ ಕ್ಷಾಮವು ಉಂಟಾದ್ದರಿಂದ ಅಂತಿಯೋ ಕ್ಯದ ಸಹೋದರರು ಅವರಿಗೆ ಸಹಾಯವನ್ನು ನೀಡಬೇಕಾಯಿತು. ಆ ಸಹಾಯವನ್ನು "ಹಿರಿಯರಿಗೆ" ಕಳುಹಿಸಿಕೊಡಲಾಯಿತು (ಅಪೊಸ್ತಲರ ಕೃತ್ಯಗಳು 11:30). ಪೌಲನ ಪ್ರಥಮ ಸೇವಾ ಪ್ರಯಾಣದಲ್ಲಿ, ಹಿರಿಯರನ್ನು ನೇಮಿಸುವ ಪ್ರಕ್ರಿಯೆ ನಡೆಯಿತು. ಪೌಲ ಬಾರ್ನಬರು ಸೇವೆ ಮಾಡಿದ ನೂತನ ಸಭೆಗಳಲ್ಲಿ ನಾಯಕರನ್ನು ನೇಮಿಸಿದರು, ಆ ನಾಯಕರನ್ನೆ "ಹಿರಿಯರು" ಎಂದು ಕರೆದರು (ಅಪೊಸ್ತಲರ ಕೃತ್ಯಗಳು 14:23).

ಅವರು ಯೆರೂಸಲೇಮಿನಲ್ಲಿ, ತಮ್ಮ ಪ್ರಥಮ ಪ್ರಯಾಣವನ್ನು ಅಂತ್ಯಗೊಳಿಸಿ, ಸುನ್ನತಿಯ ಕುರಿತಾದ ಸಮಸ್ಯೆಯನ್ನು ಪರಿಹರಿಸುವ ಚರ್ಚೆಗಾಗಿ ಸೇರಿಬಂದಿರುವಾಗ, ಅಪೊಸ್ತಲರೊಂದಿಗೆ ಇತರ ನಾಯಕರುಗಳು ಸಹ ಉಪಸ್ಥಿತರಿದ್ದರು. ಅವರನ್ನು "ಹಿರಿಯರು" ಎಂದು ಕರೆದರು (ಅಪೊಸ್ತಲರ ಕೃತ್ಯಗಳು 15:2, 4, 6, 22). ಮಿಲೇತೆನಲ್ಲಿ ಪೌಲನು ಕಣ್ಣೀರು ಸುರಿಸಿ ಎಫೆಸದಿಂದ ಬಂದ ಸಹೋದರರಿಂದ ಬೀಳ್ಕೊಡುವ ಸಭೆಯಲ್ಲಿ "ಹಿರಿಯರಿದ್ದರು" ಎಂದು ಲೂಕನು ಬರೆಯುತ್ತಾನೆ (ಅಪೊಸ್ತರ ಕೃತ್ಯಗಳು 20:17, 28). ಮೂರನೆಯ ಸೇವಾ ಪ್ರಯಾಣದ ಅಂತ್ಯದಲ್ಲಿ ಹರಕೆ ಮಾಡಿದ್ದ ನಾಲ್ಕು ಜನರಿಗೆ ಪೌಲನು ಸಹಾಯಿಸಬೇಕೆಂಬ ವಿಶೇಷ ಮನವಿಯನ್ನು ಯೆರೂಸಲೇಮಿನ ಹಿರಿಯರು ಮುಂದಿಟ್ಟರು (ಅಪೊಸ್ತಲರ ಕೃತ್ಯಗಳು 21:18-25).

ಈ ಎಲ್ಲಾ ಸಂರ್ಭಗಳಲ್ಲಿ ಹಿರಿಯರ ಹೆಸರುಗಳು ಪ್ರಚಲಿತವಾಗಿರುವದರಿಂದ ಸ್ಥಳೀಯ ಸಭೆಗಳಲ್ಲಿ ನಾಯಕರುಗಳು ನೇಮಕಗೊಂಡಿದ್ದರು ಎಂದು ಲೂಕನು ಸ್ಪಷ್ಟ ದಾಖಲೆ ನೀಡಿರುವನು. ಅವರುಗಳನ್ನು "ಹಿರಿಯರೆಂದು" ಕರೆದು, ಅವರು ಕರ್ತನ ಸಭೆಗೆ ನಿರಂತರ ವಾದ ಯೋಜನೆ ಎಂದು ತಿಳಿಯಬೇಕು.

**ಅವರ ನಾಮಾಂಕಿತ**

ಈ ನಾಯಕರುಗಳಿಗೆ ಹೊಸ ಒಡಂಬಡಿಕೆಯಲ್ಲಿ ಮೂರು ನಾಮಾಂಕಿತಗಳನ್ನು ನೀಡಲಾಗಿದೆ: "ಹಿರಿಯರು" "ಸಭಾನಾಯಕರು" ಹಾಗೂ "ಸಭಾಪಾಲಕರು" ಮಿಲೀತೆಯಲ್ಲಿ ಪೌಲನು ಮಾತನಾಡುವಾಗ, "ಮೇಲ್ವಿಚಾರಕರು" ("ಬಿಷಪ್"; KJV), ಪೌಲನು "ಹಿರಿಯರನ್ನು" ಕರೆಯಿಸಿದನು ಎಂದು ಲೂಕನು ತಿಳಿಸಿರುವನು. (ಅಪೊಸ್ತಲರ ಕೃತ್ಯಗಳು 20:17, 28). ಪೌಲನು ತೀತನನ್ನು ಕ್ರೇತೆದಲ್ಲಿ ನೇಮಿಸಿದಾಗ, ಅವನು ಹಿರಿಯರನ್ನು ನೇಮಕ ಮಾಡಬೇಕೆಂದು ಅವನಿಗೆ ಅದೇಶ ನೀಡಿದನು ಮತ್ತು ಅವರಲ್ಲಿ ಯಾವ ಆತ್ಮಿಕ ಅರ್ಹತೆಗಳ ಇರಬೇಕು ಎಂಬುದಾಗಿ ತಿಳಿಸಿದನು. ಅವನು ಅವರನ್ನು "ಸಭಾನಾಯಕರೆಂದು" ಕರೆದನು (ತೀತ 1:5, 7; KJV).[3] ಪೇತ್ರನು ತನ್ನನ್ನು "ಹಿರಿಯನೆಂದು" ಕರೆದುಕೊಂಡನು. ಜೊತೆ ಸಂಗಡಿಗರಾದ ಕೆಲಸಗಾರರನ್ನು ಪೇತ್ರನು ಹಿರಿಯರೆಂದು ಕರೆದಿದ್ದರೂ, ಅವರನ್ನು "ಕುರುಬರು" ಅಥವಾ "ಸಭಾಪಾಲಕರೆಂದು" ಸಂಭೋಧಿಸಿ, ಮಂದೆಯನ್ನು ಕಾಯಬೇಕೆಂದು ತಿಳಿಸಿದನು (1 ಪೇತ್ರ 5:1, 2). ಒಂದೇ ಕಾರ್ಯಕ್ಕಾಗಿ, ಸಹಜವಾಗಿ ಮೂರು ಪದಗಳನ್ನು ಬಳಸಲಾಗಿದೆ, ಅವರು ಒಂದೇ ಸ್ಥಳದಲ್ಲಿ ಕೆಲಸ ಮಾಡುವ ಒಂದೇ ವಿಧವಾದ ವ್ಯಕ್ತಿಗಳು ಆಗಿದ್ದರು, ಅವರೆಲ್ಲರಿಗೆ ಈ ಮೂರು ನಾಮಾಂಕಿತಗಳನ್ನು ನೀಡಲಾಗಿದೆ.

*ಪ್ರೆಸ್‌ಬ್ಯೂಟರ್,* ಎಂಬದನ್ನು ಗ್ರೀಕ್ ಭಾಷೆಯಲ್ಲಿ ಅನುವಾದ ಮಾಡಿ "ಹಿರಿಯರು" ಎಂದು ವಿವಿಧವಾಗಿ ಹೊಸ ಒಡಂಬಡಿಕೆಯಲ್ಲಿ ಎಪ್ಪತ್ತ - ನಾಲ್ಕು ಬಾರಿ ಬಳಸಲಾಗಿದೆ. ಅಪೊಸ್ತಲರ ಕೃತ್ಯದಲ್ಲಿ ಹತ್ತೊಂಬತ್ತು ಬಾರಿ ಬಳಸಲಾಗಿದೆ. ಅಪೊಸ್ತಲರ ಕೃತ್ಯಗಳ ಹಿನ್ನೆಲೆಯಲ್ಲಿ ವೃದ್ಧನಾದವನಿಗೆ "ಹಿರಿಯನು" ಎಂದು ಸಂಬೋಧಿಸಲಾಗಿದೆ, ಯೆಹೂದ್ಯರ ಸಮೂದಾಯದಲ್ಲಿ ಇದನ್ನು ನಾಯಕರು ಎಂದು ಏಳು ಬಾರಿ ಬಳಸಲಾಗಿದೆ. ಕರ್ತನ ಸಭೆಯಯಲ್ಲಿದ್ದ ನಾಯಕರನ್ನು ಕುರಿತು ಅಪೊಸ್ತಲರ ಕೃತ್ಯದಲ್ಲಿ ತಿಳಿಸಲಾಗಿದೆ: ಈ ವಿಧವಾಗಿ ಹತ್ತು ಬಾರಿ ಪದ ಪ್ರಯೋಗ ಮಾಡಲಾಗಿದೆ. ವಯಸ್ಸು ಹಾಗೂ ಅನುಭವದ ಮೇರೆಗೆ "ಹಿರಿಯರು" ಎಂಬ ಪದ ಬಳಕೆಯಾಗಿದ್ದರೂ, ಕರ್ತನ ಸಭೆಯಲ್ಲಿ ನಾಯಕತ್ವವನ್ನು ವಹಿಸುವವರಿಗಾಗಿ ವಿಶೇಷ ನೇಮಕಾತಿ ಎಂದು ಉಲ್ಲೇಖಿಸಲಾಗಿದೆ. ಅವರು ವಯೋವೃದ್ಧರಾಗಿರುವದರಿಂದ, ಅನುಭವಿಗಳು ಮತ್ತು ಆತ್ಮೀಕ ಪರಿಪಕ್ವತೆಯನ್ನು ಹೊಂದಿರುವದರಿಂದ ಸಭೆಗಳಿಗೆ ನಾಯಕರಾಗಿರಬೇಕು.

ಬಿಷಪ್ ಅಥವಾ ಮೇಲ್ವಿಚಾರಕರು (*ಎಪಿಸ್‌ಕೋಪಸ್*) ಎಂಬದರಲ್ಲಿ, ಎರಡು ಗ್ರೀಕ್ ಪದಗಳನ್ನು ಒಟ್ಟುಗೂಡಿಸಿ "ಸ್ಕೋಪ್ ಓಪರ್" "ಮೇಲ್ವಿ-ಚಾರಣೆ" ಮಾಡಲು ಎಂದು ಅನುವಾದಿಸಲಾಗಿದೆ. ಕೆಲಸವನ್ನು ಹಾಗೂ ಕೆಲಸಗಾರರನ್ನು ಮೇಲ್ವಿಚಾರಣೆ ಮಾಡುವದು ನಾಯಕತ್ವವಾಗಿದೆ. ಹೊಸ ಒಡಂಬಡಿಕೆಯಲ್ಲಿ ಈ ಪದವನ್ನು ಹನ್ನೊಂದು ಬಾರಿ ಪದ ಪ್ರಯೋಗ ಮಾಡಲಾಗಿದೆ; ಸ್ಥಳೀಯ ಸಭೆಯ ನಾಯಕರುಗಳಿಗೂ ಈ ಪದವನ್ನು ಬಳಸಲಾಗಿದೆ (ಅಪೊಸ್ತಲರ ಕೃತ್ಯಗಳು 1:20). ಅದನ್ನು ಒಂದು ಬಾರಿ, "ಜಾಗೃತಿಯಿಂದ ನೋಡಿಕೊಳ್ಳಿರಿ" ಎಂಬುದಾಗಿದೆ (ಇಬ್ರಿಯ 12:15) ಮತ್ತು ಎರಡು ಬಾರಿ "ದರ್ಶನ" ಎಂಬುದಾಗಿರುತ್ತದೆ (ಲೂಕ 19:44; 1 ಪೇತ್ರ 2:12). ಇವರನ್ನು ಸ್ಥಳೀಯ ಸಭೆಯ ಸ್ಥಾನಿಕ ನಾಯಕರು ಎಂದು ಹೇಳುವಾಗ ಒಂದು ಗುಂಪಿನ ಮೇಲ್ವಿಚಾರಣೆ ಮಾಡುವವರು ಎಂಬ ಉಲ್ಲೇಖವಾಗಿದೆ.

"ಸಭಾಪಾಲಕ" ಅಥವಾ "ಕುರುಬ" *(ಪೊಯಿಮನ್)* ಎಂಬುದಾಗಿ ಅಕ್ಷರಶಃ ಕುರಿ ಕಾಯುವವರಿಗೆ ಕರೆಯುತ್ತಾರೆ. ಈ ಪದವನ್ನು ಹೊಸ ಒಡಂಬಡಿಕೆಯಲ್ಲಿ ಮೂವತ್ತೊಂಬತ್ತು ಸಾರಿ ಬಳಸಲಾಗಿದೆ ಕುರಿ ಕಾಯುವಂಥವರಿಗೆ ಕುರುಬ ಎಂದು ಹದಿಮೂರು ಬಾರಿ ಬಳಸಲಾಗಿದೆ. ಯೇಸು ಕ್ರಿಸ್ತನು ಆತ್ಮಗಳ ಕುರುಬನು ಎಂದು ಐದು ಸಾರಿ ತಿಳಿಸಲಾಗಿದೆ. ಸ್ಥಳೀಯ ಸಭೆಯ ಪಾಲಕರಿಗೆ ಕುರುಬರು ಎಂದು ಏಳು ಸಾರಿ ತಿಳಿಸಲಾಗಿದೆ ಹಿರಿಯನ ಕೆಲಸಕ್ಕೆ ಒಂದು ಸಾರಿ, ನಾಮಪದವನ್ನು ಬಳಸಲಾಗಿದೆ. ಸಭೆಯಲ್ಲಿ ಈ ಪದಗಳನ್ನು

ವ್ಯತ್ಯಾಸವಾಗಿ ಬಳಸಬಹುದು ಎಂಬ ಪುರಾವೆಗಳಿವೆ (ಅಪೊಸ್ತಲರ ಕೃತ್ಯಗಳು 20:28). ನಾಯಕರಾದವರು "ಹಿರಿಯರಾಗಿರಲೂ" ಸಹ ಸಾಧ್ಯವಿದೆ, ಅದು ಅವರ ವಯಸ್ಸಿಗೆ, ಅನುಭವಕ್ಕೆ ಹಾಗೂ ಆತ್ಮೀಕ ಪರಿಪಕ್ವತೆಗೆ ಅನುಗುಣವಾಗಿರುತ್ತದೆ, ಮತ್ತು "ಸಭಾಪಾಲಕರು" ಹಿಂಡನ್ನು ಕಾಯುವ ಕುರುಬರು ಎಂಬುದಾಗಿರುತ್ತದೆ (ಎಫೆಸದ ಕ್ರೈಸ್ತರು). ಅವರನ್ನು "ಸಭಾನಾಯಕರು" ಎಂಬುದಾಗಿಯೂ ಕರೆಯಬಹುದು, ಅವರು ಆ ಸಮೂಹದ ಹಾಗೂ ಹೋಗುಗಳನ್ನು ಗಮನಿಸುವವರಾಗಿರುತ್ತಾರೆ.

ಆದಿ ಸಭೆಯಲ್ಲಿ ಈ ವಿಧವಾದ ಕಾರ್ಯಾಲಯವು ಇದ್ದ ಸಭೆಗೆ, "ಮೇಲ್ವಿಚಾರಕರೂ ಮತ್ತು ಡೀಕನ್‌ಗಳು" ಎಂದು ಫಿಲಿಪ್ಪಿ ಸಭೆಗೆ ತಿಳಿಸಿರುವನು (ಫಿಲಿಪ್ಪಿ 1:1). ಸಭೆಯಲ್ಲಿ ದೇವರು ಕ್ರಮಬದ್ಧವಾದ ನಾಯಕತ್ವವನ್ನು ನೀಡಿರುವನು. ಅದಲ್ಲಿರುವ "ಹಿರಿಯರು" "ಸಭಾನಾಯಕರು" ಮತ್ತು ಸಭಾಪಾಲಕರು ಎಂದು ನಾಮಾಂಕಿತವನ್ನು ಅಂತರ್ ಬದಲಾವಣೆ ಮಾಡಬಹುದಾಗಿದೆ. ಇಲ್ಲಿ "ಡೀಕನ್" ಎಂಬ ಪದವಿರುವದರಿಂದ, ಇವರು ನಾಯಕರುಗಳೊಂದಿಗೆ ಸೇರಿ ಕೆಲಸ ಮಾಡುವವರು ಎಂದು ಗುರುತಿಸಲಾಗಿದೆ, ಫಿಲಿಪ್ಪಿ ಸಭೆಗೆ ಬರೆಯುವಾಗ ಈ ವಿಷಯವನ್ನು ಬರೆಯಲಾಗಿದೆ.

**ಅವರ ಪಾತ್ರಗಳು**

ಹಿರಿಯರ, ಸಭಾನಾಯಕರ, ಸಭಾಪಾಲಕರ ಕೆಲಸಗಳು ಮೂರು ವಿಧವಾಗಿರುತ್ತದೆ. ಮೊದಲನೆಯದಾಗಿ ಹಿರಿಯರು ಕಾರ್ಯತಂತ್ರ ಮಾಡಬೇಕು, ಅವರು ಸ್ಥಳೀಯ ಸಭೆಯ ಆರಾಧನೆಯಲ್ಲಿ, ಜವಬ್ದಾರಿಯ ಆಡಳಿತವನ್ನು ಹೊಂದಿರುವರು (1 ತಿಮೊಥೆ 3:5; 5:17). ಅವರು ಮಾದರಿಯಾದ ಆಡಳಿತವನ್ನು ಮಾಡಬೇಕು, ಉಪದೇಶವನ್ನು ಮತ್ತು ವಿಶೇಷ ಗಮನವನ್ನು ನೀಡಬೇಕು (ಇಬ್ರಿಯ 13:7, 17),

ಎರಡನೇಯದಾಗಿ, ಅವರು ತಮ್ಮ ಜೀವನ ಶೈಲಿಗೆ ಹಾಗೂ ವೈಯಕ್ತಿಕ ವರ್ತನೆಗೆ ವಿಶೇಷ *ಗಮನ ನೀಡಬೇಕು* (ಅಪೊಸ್ತಲರ ಕೃತ್ಯಗಳು 20:28). ಇಂತಹ ವ್ಯಕ್ತಿಗಳು ಅವರ ಸಭೆಗಳ ಆತ್ಮಗಳಿಗೆ ವಿಶೇಷ ಕಾಳಜಿ ವಹಿಸಬೇಕು (ಇಬ್ರಿಯ 13:17), ಅವರು ವಾಕ್ಯಕ್ಕೆ ನಂಬಿಗಸ್ತರಾಗಿದ್ದು, ಸತ್ಯವನ್ನು ವಿರೋಧಿಸುವವರಿಗೆ "ಸರಿಯಾದ ಉತ್ತರವನ್ನು ನೀಡಲು ಸಿದ್ಧರಾಗಿರ ಬೇಕು" (ತೀತ 1:9).

ಮೂರನೆಯದಾಗಿ ಅವರು ಪೋಷಣೆಯನ್ನು ಮಾಡಬೇಕು. ದೇವರೇ ಸಭೆಯನ್ನು ಯೋಜಿಸಿರುವದರಿಂದ ಅರ್ಹರಾದವರು ಅಲ್ಲಿರುವ ಆತ್ಮಗಳನ್ನು ಪೋಷಿಸಬೇಕು (ಅಪೊಸ್ತಲರ ಕೃತ್ಯಗಳು 20:28; 1 ಪೇತ್ರ 5:2). ಅವರು ಉಪದೇಶಕರಾಗಬೇಕು (1 ತಿಮೊಥೆ 3:2). ಸಕರಾತ್ಮಕವಾದ ಮಾರ್ಗದರ್ಶನ ನೀಡಬೇಕು; ಸುಳ್ಳು ಪ್ರವಾದಿಗಳನ್ನು ಎದುರಿಸುವಂತೆ ನಕಾರಾತ್ಮವಾಗಿರಬೇಕು, ಅದಕ್ಕಾಗಿ ಕ್ರಿಸ್ತನ ಸಿದ್ದಾಂಥಗಳನ್ನು ಅರಿತಿರಬೇಕು (ತೀತ 1:9). ಸಭೆಯ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಮೂಡಿಸುವ ಸುಳ್ಳು ಬೋಧಕರನ್ನು ಎದುರಿಸಲು ಧೈರ್ಯವುಳ್ಳವರಾಗಿರಬೇಕು (ತೀತ 1:10, 11).

## ಮುಕ್ತಾಯ

ಮೊದಲ ಶತಮಾನದ ಸಭೆಗಳವರು ಸ್ವತಂತ್ರರಾಗಿದ್ದರು: ಅವರು ತಮ್ಮ ಸ್ವಂತ ನಿಲುವನ್ನು ಹೊಂದಿಕೊಂಡು, ತಮ್ಮನ್ನು ತಾವೇ ನೋಡಿಕೊಳ್ಳುವವರಾಗಿದ್ದರು. ಯಾವುದೇ ಸಭೆಗಳು ಇತರೆ ಸಭೆಗಳ ಮೇಲೆ ಅಧಿಕಾರ ಚಲಾಯಿಸಲಿಲ್ಲ. ಈ ಸಭೆಗಳು ಡಯಾಸಿಸ್, ಪ್ರೆಸ್ಬಿಟರ್ ಸಂಘಟನೆಗಳೆಂದು ಮಾರ್ಪಾಡಾಗಲಿಲ್ಲ, ಜಿಲ್ಲೆಯ ಧರ್ಮವ್ಯವಸ್ಥಾಪಕ ಸಭೆಗಳಾಗಲಿಲ್ಲ. ಅವರಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕೇಂದ್ರಗಳಿರಲಿಲ್ಲ. ಸ್ಥಳೀಯವಾದ ಸಭೆಗಳಲ್ಲಿದ್ದು ಕರ್ತನಾದ ಯೇಸು ಕ್ರಿಸ್ತನನ್ನು ಸೇವಿಸಿದರು. ಒಂದೇ ಸುವಾರ್ತೆಗೆ

ಸ್ಪಂದಿಸಿದರು; ಕರ್ತನು ಅಂಥವರನ್ನು ಸಭೆಗೆ ಸೇರಿಸಿದನು. ಅವರೆಲ್ಲರು ಆರಾಧಿಸಿದರು ಬೋಧಿಸಿದರು, ಒಂದೇ ರೀತಿಯಾಗಿ ಕಾರ್ಯ ನಿರ್ವಹಿಸಿದರು. ಅವರು ಯೇಸು ಕ್ರಿಸ್ತನ ಒಂದೇ "ಶಿರಸ್ಸಿಗೆ" ಅಡಿಯಾಳುಗಳಾಗಿದ್ದರಿಂದ, ಒಂದೇ ಸ್ವಭಾವವನ್ನು ಹಂಚಿಕೊಂಡರು (ಕೊಲೊಸ್ಸೆ 1:18). ಆತನು ಸಕಲ ಸಭೆಗಳಿಗೂ ಒಂದೇ ಸಲಹೆ ಹಾಗೂ ಬೋಧನೆಗಳನ್ನು ನೀಡಿದ್ದನು. ಸ್ಥಳೀಯ ಸಭೆಗಳು ವಿವಿಧ ಸಂದರ್ಭಗಳಲ್ಲಿ ಪರಸ್ಪರ ಸಹಾಯ ಮಾಡಿದ್ದರೂ ಕೂಡ, ಅವರು ಸ್ವತಂತ್ರರಾಗಿದ್ದರು.

ಪ್ರತಿ ಸಭೆಗಳಲ್ಲೂ ಪುರುಷರು ನಾಯಕತ್ವ ವಹಿಸಿದರು, ಅವರು ಆತ್ಮೀಕವಾಗಿ ಅರ್ಹರೆಂದು ತಿಳಿದಾಗ ಇತರೆ ಸದಸ್ಯರು ಅವರನ್ನು ಆಯ್ಕೆ ಮಾಡಿದರು. ಈ ಪುರುಷರ ಹಾಗೂ ಅವರ ಸಭೆಯ ಸಂಬಂಧದ ಬಗ್ಗೆ. ಇನ್ನೊಂದು ಗುಂಪಿನವರನ್ನೂ ಸಹ ಗುರುತಿಸಲಾಗಿದೆ. ಒಂದು ಸಭೆಗೆ ಒಬ್ಬ ಹಿರಿಯನು ಮಾತ್ರ ಮುಖ್ಯಸ್ಥನು ಎಂದು ಹೊಸ ಒಡಂಬಡಿಕೆಯಲ್ಲಿ ತಿಳಿಸಿರುವದಿಲ್ಲ. ಸಭೆಗಳ ಒಂದು ಸಮೂಹಕ್ಕೆ ಒಬ್ಬನೇ ನಾಯಕನೆಂದಾಗಲೀ ಅಥವಾ ಪ್ರಮುಖನು ಅಥವಾ ಮಾರ್ಗದರ್ಶನ ನೀಡುವ ಹಿರಿಯನು ಎಂಬುದಾಗಿರುವದಿಲ್ಲ. ಪ್ರತಿಯೊಬ್ಬನು ಸಮನಾದ ಹೊಣೆಯನ್ನು ಹಾಗೂ ಅಧಿಕಾರವನ್ನು ಹೊಂದಿರುವನು.

ಸೇವೆ ಮಾಡುತ್ತಿರುವಂಥ ಸಭೆಯಲ್ಲಿ ಅವರು ಕ್ರೈಸ್ತರ ಕಾರ್ಯಗಳನ್ನು ಮುಂದುವರಿಸ ಬೇಕು. ಇತರೆ ಸಭೆಗಳ ಹಿರಿಯರ ಮೇಲೆ ಅವರಿಗೆ ಯಾವುದೇ ಅಧಿಕಾರವು ಇರುವದಿಲ್ಲ. ಮಾರ್ಗದರ್ಶನ ಪಡೆಯಲು ಗೌರವ ಪೂರ್ವಕವಾಗಿ ಬೇರೆ ಸಭೆಯ ಹಿರಿಯರನ್ನು ಸಂಧಿಸಬಹುದೇ ವಿನಃ, ಅವರ ಮೇಲೆ ಅಧಿಕಾರ ನಡೆಸುವಂಥ ವ್ಯವಸ್ಥೆಯನ್ನು ದೇವರು ಯೋಜಿಸಿರುವದಿಲ್ಲ.

ಸಭಾ ನಾಯಕರುಗಳು ಯಾವುದೇ ವಿಧವಾದ ನಿಯಾಮಾವಳಿಗಳನ್ನು ಹಾಗೂ ಸಂಪ್ರದಾಯಗಳನ್ನು ರೂಪಿಸಲಿಲ್ಲ, ಮೋಶೆಯ ನಿಯಮಾವಳಿಗನ್ವಯ ಯೆಹೂದ್ಯರು ಮಾಡಿದ ಸಂಪ್ರದಾಯಗಳನ್ನು ಮಾಡಲಿಲ್ಲ. ಒಡಂಬಡಿಕೆಗಳ ಮಧ್ಯದ ಅವಧಿಯಲ್ಲಿ ಅವರು ರೂಪಿಸಿದ ಕಾರ್ಯಗಳನ್ನು ಮಾಡಲಿಲ್ಲ. ಟಲ್ಮುಡ್ "ಮಿಶ್ನ" ಮತ್ತು "ಗೆಮೆರಾ" ಎಂಬ ಎರಡು ಭಾಗಗಳನ್ನು ಒಳಗೊಂಡಿದ್ದವು. ಇಸ್ರಾಯೇಲ್ಯರಿಗೆ ನೀಡಲಾದ ನಿಯಮಾವಳಿಗಳ ಸಂಗಡ ರೂಪಿಸಲ್ಪಟ್ಟ, ಪುರಾತನವಾದ ಯೆಹೂದ್ಯರ ಸಂಪ್ರದಾಯಗಳಾಗಿದ್ದವು.

ಅನೇಕ ಸಂದರ್ಭಗಳಲ್ಲಿ ದೇವರು ಈ ವಿಧವಾದ ಸಂಪ್ರದಾಯಗಳನ್ನು ಖಂಡಿಸಿದ್ದನು (ಮಾರ್ಕ 7:6-9). ಸಭಾನಾಯಕರುಗಳು ಹೊಸ ನಿಯಮಗಳನ್ನು ಹಾಗೂ ಬೋಧನೆಗಳನ್ನಾಗಲಿ ಪರಿಚಯ ಮಾಡುವದಕ್ಕೆ ಅಧಿಕಾರವನ್ನು ಹೊಂದಿರಲಿಲ್ಲ, ಮತ್ತು ಯಾವುದೇ ಸಾಮಾಜಿಕ ಬದಲಾವಣೆಗಳನ್ನು ಮಾಡುವಂಥ ನಿಯಮಗಳನ್ನು ರೂಪಿಸುವ ಅಧಿಕಾರವನ್ನು ಹೊಂದಿರಲಿಲ್ಲ. ಅವರು ಕರ್ತನ ವಾಕ್ಯಕ್ಕೆ ಮಾತ್ರ ಒಳಪಟ್ಟವರಾಗಿದ್ದರು. ಹೊಸ ಒಡಂಬಡಿಕೆಯ ತತ್ವಗಳಿಗೆ ಒಳಪಡುವವರು, ಈ ದಿನಗಳಲ್ಲೂ ಸಹ ಅದೇ ತತ್ವವನ್ನು ಅನುಸರಿಸಬೇಕು.

ಸಭಾ ಸದಸ್ಯರುಗಳು, ಸಭೆಯ ಹಿರಿಯರಿಗೆ ಅಧೀನನಾಗಿರಬೇಕು, ಅವರನ್ನು ಹಾಗೂ ಅವರ ನಿರ್ಣಯಗಳನ್ನು ಗೌರವದಿಂದ ಸ್ವೀಕರಿಸಿ, ಅವರನ್ನೇ ಅನುಸರಿಸ ಬೇಕು. ಅವರಲ್ಲಿ ದೈವೀಕ ಸದ್ಗುಣಗಳು ಇದ್ದದರಿಂದ ಹಾಗೂ ನಿದರ್ಶನದ ಜೀವಿ ತವು ಇದ್ದದ್ದರಿಂದ ಗೌರವಕ್ಕೆ ಪಾತ್ರರಾಗಿದ್ದರು (1 ಪೇತ್ರ 5:2, 3). ಅವರು ತಮ್ಮ ಸಹ ಹಿರಿಯರೊಂದಿಗೆ ಪರಸ್ಪರ ಅನ್ಯೋನ್ಯತೆಯಲ್ಲಿದ್ದರು, ಇತರೆ ಸಭಾಸದಸ್ಯರಂತೆ ಸರಳರಾಗಿದ್ದರು (ಎಫೆಸ 5:21). ವ್ಯತ್ಯಾಸವುಳ್ಳ ಅಭಿಪ್ರಾಯಗಳು ಉದ್ಭವಿಸುವಾಗ, ಐಕ್ಯತೆ ಹಾಗೂ ಸಮಾಧಾನದ ಆತ್ಮವನ್ನು ಪ್ರದರ್ಶಿಸಬೇಕು (ಎಫೆಸ 4:3). ಅವರು ಯವುದನ್ನು ಸ್ವಾರ್ಥ ಅಥವಾ ವಂಚನೆಯಿಂದ ಮಾಡಬಾರದು, "ತನಗಿಂತಲೂ ಮತ್ತೊಬ್ಬನು ಹಚ್ಚಿನವನೆಂದು" ಪರಿಗಣಿಸಬೇಕು, "ಪ್ರತಿಯೊಬ್ಬನು ದೀನ ಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಟರೆಂದು ಎಣಿಸಲಿ"

(ಫಿಲಿಪ್ಪಿ 2:3).

ಬೇರೆ ಯಾವುದೇ ವಿಧವಾದ ನಾಯಕತ್ವದ ಕ್ರಮವು ಇರುವದಿಲ್ಲ. ದೇವರು, "ಪೀಠಾ ರೋಹಣ ಮಾಡುವ ಸಭಾನಾಯಕನನ್ನು" ಜಿಲ್ಲಾಧ್ಯಕ್ಷನನ್ನು "ಕಾರ್ಡಿನಲ್ಸ್ ಗಳನ್ನು" "ಪೋಪ್‌ಗಳನ್ನು" ಹಾಗೂ "ಅಪೊಸ್ತಲರ ವೃತ್ತಿಯನ್ನು ಮುಂದುವರಿಸುವವ ರನ್ನು" ನಿರ್ಮಾಣಮಾಡಿರುವದಿಲ್ಲ. ಈಗಿನ ದಿವಸಗಳಲ್ಲಿ ಪ್ರಚಲಿತವಾಗಿರುವಂಥ ಸಂಘಸಂಸ್ಥೆಗಳ ಸಂಘಟನೆಗಳನ್ನೂ ದೇವರು ಮಾಡಿರುವದಿಲ್ಲ. ಕರ್ತನಿಂದ ನಿರ್ಮಾಣಗೊಂಡಿರುವ ಆತ್ಮಿಕ ಆಡಳಿತಕ್ಕೆ "ಹಿರೀ ಕುರುಬನ" ಸಂಗಡ ಹಾಗೂ ಆತನ ಪರವಾಗಿ ಸೇವೆಸಲ್ಲಿಸಲು ಅರ್ಹರಾದವರನ್ನು ದೇವರು ಆಯ್ಕೆ ಮಾಡಿರುವನು ಮತ್ತು ಆತನು ಅವರಿಗೆ, ಮಹಿಮೆಯ ಕಿರೀಟವನ್ನು ಅವರ ಕೆಲಸಕ್ಕೆ ಹಾಗೂ ಭಕ್ತಿಗೆ ಪ್ರತಿಫಲವಾಗಿ ನೀಡುವನು (1 ಪೇತ್ರ 5:4).

ದೇವರ ಆಡಳಿತವು ಕ್ರಿಯಶೀಲವಾಗಿರುತ್ತದೆ; ಆದಕ್ಕೆ ಹೆಚ್ಚಿನ ಮಾದರಿಯ ಅಗತ್ಯವಿರುವದಿಲ್ಲ. ಸಭಯಲ್ಲಿ ದೇವರು ತನ್ನ ಕ್ರಿಯೆಯನ್ನು ನಡೆಸುತ್ತಿರುವನೆಂಬ ದಾಖಲೆಯನ್ನು ಅಪೊಸ್ತಲರ ಕೃತ್ಯದಲ್ಲಿ ನೀಡಲಾಗಿದೆ.

---

ಟಿಪ್ಪಣಿಗಳು

[1]ಅಸ್ಸೀರಿಯದ ಅನ್ಯರ ಪ್ರಧಾನ ಪಟ್ಟಣವಾದ ನಿನೆವೆಗೆ ಇಸ್ರಾಯೇಲ್ಯರ ಪ್ರವಾದಿಯಾದ ಯೋನನನ್ನು ಕಳುಹಿಸುವದರ ಮೂಲಕ, ನಿನೆವೆಯವರು ಮಾನಸಾಂತರ ಪಡುವ ಅವಕಾಶವನ್ನು ಪಡೆದು (ಯೋನ 1:1, 2; 3:1-4). ಯೋನನು ಅವರಿಗೆ ಮೋಶೆಯ ಕಟ್ಟಳೆ ಯನ್ನು ಬೋಧಿಸಲಿಲ್ಲ, ಅದು ಅವರಿಗೆ ಅನ್ವಯವಾಗಲಿಲ್ಲ. ಪಾಪವು ನಿಯಮವನ್ನು ಮೀರಿದರ ಪರಿಣಾಮವಾಗಿರುವದರಿಂದ, ದೇವರು ಅವರಿಗೆ ಮಾನಸಾಂತರ ಪಡುವ ಅವಕಾಶವನ್ನು ನುಡಿದನು (ರೋಮಾಪುರ 4:15; 5:13; 1 ಯೋಹಾನ 3:4). ದೇವರ ವಿಶೇಷವಾದ ಅಪ್ಪಣೆಗೆ ಅವರು ಒಳಪಟ್ಟಿದ್ದರು. [2]ಹಿಂದನ ಪಾಠವನ್ನು ಗಮನಿಸಿರಿ. [3]ತೀತ 1:5ರಲ್ಲಿ *"ಫೆಸ್ಬೈಟರ್"* ಎಂಬ ಪದವನ್ನು ಬಳಸಲಾಗಿದೆ, KJV, NIV ಮತ್ತು NASB ಯಲ್ಲಿ "ಹಿರಿಯ," ಎಂಬುದಾಗಿದೆ. ತೀತ 1:7. ಎಪಿಸ್ಕೋಪಸ್ "ಸಭಾಧ್ಯಕ್ಷನು," ಅಂದರೆ "ಸಭಾನಾಕನು," KJV ಮತ್ತು, "ಮೇಲ್ವಿಚಾರಕನು," ಎಂದು NIV ಹಾಗೂ NASB ಯಲ್ಲಿ ಬಳಸಲಾಗಿದೆ.